ಆತ್ಮೀಯ ಮಾತಿನ ಪೀಠಿಕೆ ಹಾಕಿದಾಗೆಲ್ಲ ಮಾಧವಿ ಆ ಸುಳಿಯಿಂದ ತಪ್ಪಿಸಿಕೊಳ್ಳುವುದು ಹ್ಯಾಗೆ ಅಂತಲೇ ಪ್ಲ್ಯಾನ್ ಮಾಡೋದು. ಆದರೇನು? ಎಷ್ಟೋ ಸರ್ತಿ ಅಲ್ಲ ಬಹುತೇಕ ಸರ್ತಿ, ದೊಡ್ಡವಾಡ ಸರ್ ಹೇಳಿದ ಪಂಚಾಂಗ ಸರಿಯಾಗಿಬಿಟ್ಟಿರುತ್ತಿತ್ತು. ಹುಡುಗಿಯ ಮನೆ ಕಡೆಯಿಂದ, ತುತ್ತುರುತ್ತು ಅಂತ ಒಂದಿಡೀ ದಂಡೇ ಕಾಲೇಜಿಗೆ ವಕ್ಕರಿಸಿ, ಅರ್ಜೆಂಟಿಗೆ ಪ್ರಿನ್ಸಿಪಾಲ್‌ರ ಚೇಂಬರಿಗೇ ಮೀಟಿಂಗು ಕೂಡಿ ಅಹಹಾ... ಆಗ ನೋಡಬೇಕು ನೀವು ದೊಡ್ಡವಾಡ ಸರನ್ನ. ಕುಂತ ಕುರ್ಚಿ ಸರಿಸಿ ಎದ್ದು ನಿಂತರಂದರ, ನಮ್ಮ ಸಂಸ್ಕೃತಿ–ಪರಂಪರೆ–ಮೊಬೈಲು, ಟಿ.ವಿ. ಏನೇನೆಲ್ಲ ಹಾದು, ಕಡೆಗೆ, ನೋಡ್ರಿ ನೀವು ನಮ್ಮ ಕಾಲೇಜಿನ ಮಾಧವಿ ಮೇಡಂ ಅವರನ್ನ, ಏನೋ ಕೂಡಿ ಬರಲಿಲ್ಲ ಮದ್ವೆಯಾಗಿಲ್ಲ. ಅಲ್ರೀ ಇಷ್ಟ ವರ್ಷ ಹೀಂಗ್ ನಿಮ್ಮೂರಾಗ, ನಾವೆಲ್ಲ ಗಂಡಸೂರ ನಡಕ ಚೊಕ್ಕ ಚೆನ್ನದ್ಹಾಂಗ ಜೀವ್ನ ಮಾಡಿಲ್ಲ? ಅಲ್ರೀ ಈಗಿನ ಹುಡಗ್ಯಾರೂ ಇವ್ರನ್ನಾರ ನೋಡಿ ಬುದ್ಧಿ ತಿಳೀತಾರೋ ಇಲ್ಲೋ ಅಂತೀನಿ... ಅಂತ ಮಂಗಲ ಹಾಡುವಷ್ಟೊತ್ತಿಗೆ ಬಂದವರಿಗೆ ತಾವು ಯಾಕೆ ಬಂದಿದ್ದೆವು ಎಂಬ ಕಾರಣವಂತೂ ಮರೆತಿರುತ್ತಿತ್ತು. ಮಾಧವಿಗೆ, ಈ ಮನುಷ್ಯ ಹೀಗೆ ಯಾಕೆ ಸಮಯ ಸಂದರ್ಭ ಅನ್ನದೆ ನನ್ನ ಬಗ್ಗೆ ಮಾತಾಡೋದು ಅಂತ ದಿಗಿಲಾಗುತ್ತಿತ್ತಾದರೂ, ಒಮ್ಮೆಯಾದರೂ ತನ್ನ ತಕರಾರನ್ನು ತಲುಪಿಸೋದು ಸಾಧ್ಯವಾಗಿರಲಿಲ್ಲ. ಆವತ್ತು ಎಲ್ಲರ ಕಣ್ಣುಗಳು ತನ್ನನ್ನು ಇನ್ನೂ ಇನ್ನೂ ಬಿಸಿಯಾಗಿ ತಾಕುತ್ತಿವೆ ಎನ್ನಿಸಿ ಬೆವತುಬಿಡುತ್ತಿದ್ದಳು. ಇಡೀ ಕಾಲೇಜಿಗೆ ತಾನೊಬ್ಬಳೇ ಮೇಡಂ ಆಗಿಬಿಟ್ಟ ಸ್ಥಿತಿ ಇನ್ನಷ್ಟು ಅವಡುಗಚ್ಚಿ ಸೈರಿಸುವಂತೆ ಮಾಡಿಬಿಟ್ಟಿತ್ತು. ಪಾರ್ಟ್‌ಟೈಂ ಡ್ಯೂಟಿಗೆ ಮೂರ್ನಾಲ್ಕು ಹುಡುಗಿಯರು ಬರುತ್ತಿದ್ದರಾದರೂ ಅವರೊಂದಿಗೆ ಸಲುಗೆ ಸಾಧ್ಯವಾಗಿರಲಿಲ್ಲ. 'ಡ್ರೆಸ್‌ಕೋಡ್ ಬೇಕಿಲ್ಲ ಕಣಪ್ಪಾ, ನಿಮ್ಮ ಪ್ಯಾಂಟಿ ಅಚ್ಚೊತ್ತಿ ಕಾಣಲಾರದ್ಹಾಂಗೆ ಡ್ರೆಸ್ಸು, ಎದಿಗೆರಿ ಗೀರು ಕಾಣದ್ಹಾಂಗೆ ಸೀರಿ ಉಟ್ರ ಸ್ಟೂಡಂಟ್ಸ್ ಎದ್ರು ಒಂದ್ ಬಿಗಿ ಇರ್ತದ' ಅಂತ ಹೇಳಲು ಮಾಧವಿ ಅದೆಷ್ಟೋ ತಾಲೀಮು ಮಾಡಿದ್ದಳಾದರೂ ಇಂದಿಗೂ ಅದು ಕೂಡಿ ಬಂದಿರಲಿಲ್ಲ. ತುಂಬ ಅಸಭ್ಯವಾಗಿ ಯಾರೋ ಕಂಡ ದಿನದ ರಾತ್ರಿಯ ತನ್ನ ಖೋಲಿಯಲ್ಲವಳು ಧೇನಿಸುತ್ತಿದ್ದಳು. ಥೇಟ್, 'ಬಂಧನ' ಸಿನಿಮಾದ ವಿಷ್ಣುವರ್ಧನನ ಹಾಗೆ. ಆದರೆ, ಯಾವ ತಾಲೀಮೂ ರಂಗಕ್ಕೇರುತ್ತಿರಲಿಲ್ಲ. ಅದರಲ್ಲೂ ಹರೆಯದ ಹುಡುಗಿಯರನ್ನು ಬಾಜೂ ಬಾಜೂ ಕೂಡ್ರಿಸಿಕೊಂಡು ಗಂಟೆಗಟ್ಟಲೆ ಹಾಗೆ ಹರಟುವ ನಗುವ ಹಿರೀ ತಲೆಗಳನ್ನು ಕಂಡಾಗ ವಾಕರಿಕೆ ಅನ್ನಿಸುತ್ತಿತ್ತು. ಎಷ್ಟು ಸಾವಿರ ಸಲವೋ ಮಾಧವಿ ತನಗೆ ಹೇಳಿಕೊಂಡಿದ್ದಾಳೆ, ಕೇಳಿಕೊಂಡಿದ್ದಾಳೆ. ಅವರ ಮಾತಿನಲ್ಲಿ ಒಂದೇ ಒಂದು ಅಪಾರ್ಥ, ಅಶ್ಲೀಲ ಹುಡುಕುವುದೂ ಸಾಧ್ಯವಿಲ್ಲ. ಅವರೇನು ಇವರ ಮೈಕೈ ಮುಟ್ಟಿ ತಟ್ಟುವುದಿಲ್ಲ. ಮತ್ತೆ... ಯಾವ ಸಾಕ್ಷಿಯೂ ಇಲ್ಲದೆಯೂ ನನಗೇಕೆ ಇದು ಅಬದ್ಧ ಅನ್ನಿಸುತ್ತಿದೆ. ಸುಖಾಸುಮ್ಮನೆ ಇನ್ನೊಬ್ಬರನ್ನು ಅನುಮಾನಿಸುವಷ್ಟು ಕೆಳಗಿಳಿದು ಬಿಟ್ಟಿದ್ದೇನೆಯೇ? ಮಾಧವಿ, ಕೆಲವೊಮ್ಮೆ ಕಣ್ಣೀರಿನಿಂದ ಮನಸ್ಸನ್ನು ತಿಕ್ಕಿ ತಿಕ್ಕಿ ತೊಳೆದಿದ್ದಾಳೆ. ಆದರೆ... ನೋಡುತ್ತಿದ್ದಾಳೆ. ದಿನವೂ ಒಂದು ಕ್ಲಾಸು ಮುಗಿಸಿ ಬರುವಾಗ ಉಸ್ಸೆಂದು ಕಾಲೆಳೆದುಕೊಂಡು ಬರುವ ಈ ಹಿರೀಕರು, ಪಾರ್ಟ್ ಟೈಂ ಲೆಕ್ಚರರ್ಸ್ ಬರುವ ಅಂತಂಥ ದಿನ ಮಾತ್ರ ಒಳ್ಳೇ ಹುರುಪಲ್ಲಿ ಹೆಜ್ಜೆ ಹಾಕೋದು. ಇದು ಹೀಗೇ ಎಂದು ಗುರುತು ಹಾಕಲಾಗದ ಅದೆಷ್ಟು ನೀಚತನಗಳಿರುತ್ತವೆ, ಅವುಗಳಿಗೆ ಹೆಸರಿಲ್ಲ, ಬಣ್ಣವಿಲ್ಲ, ಪುರಾವೆಗಳಿಲ್ಲ. ಇದು ಸಹಜವೇ? ಎಲ್ಲರಲ್ಲೂ ಹೀಗೆ ಒಳಗೊಳಗೇ ಡೌಲು ಬಡಿವ ಜಾಯಮಾನ ಇರುತ್ತದೆಯೇ? ನಾನೂ ಹಾಗೆಯೇ? ಉಳಿದವರ ಮನಸ್ಸಿನ ಉಬ್ಬು ನನಗೆ ಕಾಣುತ್ತದೆಯಾದರೆ, ನನ್ನ ಉಬ್ಬುಬ್ಬೆತನವೂ ಉಳಿದವರಿಗೆ ಕಾಣುತ್ತಿರಬೇಕಲ್ಲ? ಬೆಚ್ಚಿ ಬೀಳುತ್ತಾಳೆ ಮಾಧವಿ ತನಗೆ ತಾನೇ.

ಆ ದಿನಗಳಲ್ಲಿ... ದಂಡವತೆ ಬಗ್ಗೆ ನನಗೆ ಆದರ ಬೆಳೆದಿತ್ತಲ್ಲ? 40 ದಾಟುತ್ತಿರುವ ಆ ದಿನಗಳಲ್ಲೂ ನಾನು ಮದುವೆ ಬಗ್ಗೆ ಕನಸು ಕಂಡಿದ್ದೆನಲ್ಲ. ದಂಡವತೆಯ ಮೊದಲ ಹೆಂಡತಿ ತೀರಿಕೊಂಡು, ಒಬ್ಬ